## "ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ"

# ಕಾರ್ಯಚಟುವಟಿಕೆಗಳ ತಾತ್ಕಾಲಿಕ ವೇಳಾ ಪಟ್ಟಿ

ರಾಜ್ಯಾದ್ಯಂತ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ 2020ನೇ ಸಾಲಿನ 14 ನವಂಬರ್ 2020 ರಿಂದ 24 ಜನವರಿ 2021ರವರೆಗೆ ನಡೆಸಲಾಗುವ "ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ"ಕ್ಕೆ ಸಂಬಂದಿಸಿದಂತೆ ಕರಡು ವೇಳಾ ಪಟ್ಟಿ.

| ಕ್ರಮ ಸಂಖ್ಯೆ | ಕಾರ್ಯ ಚಟುವಟಿಕೆ/ ಕಾರ್ಯಕ್ರಮ | ತಾತ್ಕಾಲಿಕ ಅವಧಿ |
|---|---|---|
| 01 | ರಾಜ್ಯ ಮಟ್ಟದಿಂದ ಯುಟ್ಯೂಬ್ ಲೈವ್/ನೇರ ಪ್ರಸಾರ ತರಬೇತಿ ಕಾರ್ಯಕ್ರಮ–ಎಲ್ಲಾ ಗ್ರಾಮ ಪಂಚಾಯತಿಗಳ ಆಡಳಿತಾಧಿಕಾರಿಗಳು, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಪ್ರತೀ ಗ್ರಾಮ ಪಂಚಾಯತಿ ಮಟ್ಟದಲ್ಲಿ 02 ಮಕ್ಕಳು ಹಾಗೂ ಮಕ್ಕಳ ಅಭಿವೃದ್ಧಿಗೆ ಸಂಬಂದಿಸಿದ ಇಲಾಖೆಗಳ ಅಧಿಕಾರಿಗಳು ಭಾಗವಹಿಸುವುದು. | 07 ನವಂಬರ್ 2020 ರಂದು |
| 02 | 2018, 2019ರಲ್ಲಿ ನಡೆಸಲಾದ ಮಕ್ಕಳ ಹಕ್ಕುಗಳ ಗ್ರಾಮ ಸಭೆಗಳಲ್ಲಿನ ನಿರ್ಣಯಗಳ ಅನುಪಾಲನಾ ವರದಿ ತಯಾರಿಸುವುದು. | 08 ನವಂಬರ್ 2020 ರಿಂದ 15 ನವಂಬರ್ 2020 ರೊಳಗೆ |
| 03 | ಪ್ರತಿ ವಾರ್ಡ್ ಮಟ್ಟದ ಮತ್ತು ಗ್ರಾಮ ಪಂಚಾಯತಿ ಮಟ್ಟದ ಮಕ್ಕಳ ಪರಿಸ್ಥಿತಿಯನ್ನು (ಅಕ್ಟೋಬರ್ 2020ರಲ್ಲಿ ಇರುವಂತೆ) ವಿವರಿಸಿರುವ ಅಂಕಿಸಂಖ್ಯೆಯ ಚಾರ್ಟ್ / ಪಟ್ಟಿಯನ್ನು ತಯಾರಿಸುವುದು ಹಾಗೂ ಪ್ರಕಟಿಸುವುದು. | 10 ನವಂಬರ್ 2020 ರೊಳಗೆ |
| 04 | ಗ್ರಾಮ ಪಂಚಾಯತಿ ಮಟ್ಟದಲ್ಲಿ 10 ವಾರಗಳ " ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ" ಮತ್ತು ಮಕ್ಕಳ ಹಕ್ಕುಗಳ ಗ್ರಾಮ ಸಭೆಯ ಪೂರ್ವ ತಯಾರಿ ಸಭೆ ಹಾಗೂ ಕಾರ್ಯಕ್ರಮ/ಚಟುವಟಿಕೆಗಳ ವೇಳಾ ಪಟ್ಟಿಯನ್ನು ಸಿದ್ಧಪಡಿಸುವುದು. | 10 ರಿಂದ 15 ನವಂಬರ್ 2020 ರೊಳಗೆ |
| 05 | ಗ್ರಾಮ ಪಂಚಾಯತಿಯಿಂದ ಪೂರ್ವ ತಯಾರಿ ಸಭೆಯಲ್ಲಿ ಗ್ರಾಮ ಪಂಚಾಯತಿ ಶಿಕ್ಷಣ ಕಾರ್ಯಪಡೆಯಿಂದ ಒಬ್ಬ ಅಧಿಕಾರಿ/ಅಧಿಕಾರೇತರರನ್ನು 'ಬಾಲ ಮಿತ್ರ' ಎಂದು ಘೋಷಿಸುವುದು. | 10 ರಿಂದ 15 ನವಂಬರ್ 2020 ರೊಳಗೆ |
| 06 | ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ **ಓದುವ ಬೆಳಕು" ಚಾಲನೆಗೆ** ಕಾರ್ಯಕ್ರಮವನ್ನು ನಡೆಸುವುದು ಮತ್ತು ಕನಿಷ್ಠ 20 ಮಕ್ಕಳನ್ನು ಗ್ರಾಮ ಪಂಚಾಯತಿ ಗ್ರಂಥಾಲಯಕ್ಕೆ ನೊಂದಾಯಿಸುವ ಮೂಲಕ **"ಓದುವ ಬೆಳಕು"** ಕಾರ್ಯಕ್ರಮಕ್ಕೆ ಚಾಲನೆ ನೀಡುವುದು. | ದಿನಾಂಕ 14–11–2020 |
| 07 | **"ಓದುವ ಬೆಳಕು"** ಕಾರ್ಯಕ್ರಮ ಕುರಿತು ಹೆಚ್ಚಿನ ಪ್ರಚಾರ ನೀಡಿ ಗ್ರಾಮೀಣ ಪ್ರದೇಶದ 6–18 ವಯಸ್ಸಿನ ಶೇಕಡ 100 ಮಕ್ಕಳು ಗ್ರಾಮ ಪಂಚಾಯತಿ ಗ್ರಂಥಾಲಯಗಳಲ್ಲಿ ನೊಂದಾಯಿಸಿಕೊಳ್ಳುವಂತೆ ಅಗತ್ಯ ಕ್ರಮ ಕೈಗೊಳ್ಳುವುದು. | 14–11–2020 ರಿಂದ 15–12–2020 ರ ಒಳಗೆ |
| 08 | ಗ್ರಾಮ ಪಂಚಾಯಿತಿಯಿಂದ ಮಕ್ಕಳ ಹಕ್ಕುಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ಗ್ರಾಮ ಪಂಚಾಯತ್ ಫೇಸ್ ಬುಕ್ ಪೇಜ್ ರಚಿಸುವುದು ಮತ್ತು ಪ್ರಚಾರ ಮಾಡುವುದು. | 15 ನವಂಬರ್ 2020 ರೊಳಗೆ |
| 09 | ಮಕ್ಕಳ ಕೋರಿಕೆ ಪತ್ರ ಮುದ್ರಿಸುವುದು, ಪೋಸ್ಟರ್ ತಯಾರಿಸುವುದು, ಮಕ್ಕಳ ಧನಿ ಪೆಟ್ಟಿಗೆ ಸಿದ್ಧಪಡಿಸುವುದು | 15 ನವಂಬರ್ 2020 ರೊಳಗೆ |
| 10 | ಗ್ರಾಮ ಪಂಚಾಯತಿ ವ್ಯಾಪ್ತಿಯ ಎಲ್ಲಾ ಗ್ರಾಮ/ವಾರ್ಡ್‌ಗಳಲ್ಲಿ ಮಕ್ಕಳ ಧನಿ ಪೆಟ್ಟಿಗೆ ಇಡುವುದು ಮತ್ತು ಪೋಸ್ಟರ್‌ಗಳನ್ನು ಅಂಟಿಸುವುದು. | 15 ನವಂಬರ್ 2020 ರೊಳಗೆ |
| 11 | ಗ್ರಾಮ ಪಂಚಾಯತಿ ಆಡಳಿತಾಧಿಕಾರಿಗಳು ಮತ್ತು ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳು 14 ನವಂಬರ್ 2020 ರಿಂದ 24 ಜನವರಿ 2021 ರೊಳಗೆ ಮಕ್ಕಳ ಹಕ್ಕುಗಳ ಗ್ರಾಮ | 20 ನವಂಬರ್ 2020 ರೊಳಗೆ |

| | | |
|---|---|---|
| | ಸಭೆ ನಡೆಸಲು ದಿನಾಂಕ ನಿಗದಿಗೊಳಿಸುವುದು. | |
| 12 | ಗ್ರಾಮ ಪಂಚಾಯತಿ ಶಿಕ್ಷಣ ಕಾರ್ಯಪಡೆಯಿಂದ ಬಾಲ್ಯ ವಿವಾಹ, ಬಾಲ ಕಾರ್ಮಿಕತೆ ಮತ್ತು ಮಕ್ಕಳ ಹಕ್ಕುಗಳ ಕುರಿತು ಉಪನ್ಯಾಸ | ಅಭಿಯಾನದ ಅವಧಿಯಲ್ಲಿ |
| 13 | ಗ್ರಾಮ ಪಂಚಾಯತಿ ಶಿಕ್ಷಣ ಕಾರ್ಯಪಡೆಯಿಂದ ವಿಜ್ಞಾನ ಕಾರ್ಯಕ್ರಮಗಳನ್ನು ನಡೆಸುವುದು | ಅಭಿಯಾನದ ಅವಧಿಯಲ್ಲಿ |
| 14 | ಗ್ರಾಮ/ವಾರ್ಡ್ ಮಟ್ಟದ ಮಕ್ಕಳ ಹಕ್ಕುಗಳ ಗ್ರಾಮ ಸಭೆಗಳನ್ನು ನಡೆಸುವುದು. | ಗ್ರಾಮ ಪಂಚಾಯತಿ ಮಟ್ಟದ ಮಕ್ಕಳ ಹಕ್ಕುಗಳ ಗ್ರಾಮ ಸಭೆ ನಡೆಯುವ 05 ದಿನಗಳ ಮುಂಚಿತವಾಗಿ. |
| 15 | ಫೇಸ್ ಬುಕ್ ಪೇಜಿನಿಂದ, ಮಕ್ಕಳ ಧ್ವನಿ ಪೆಟ್ಟಿಗೆಯಿಂದ, ಗ್ರಾಮ/ವಾರ್ಡ್ ಮಟ್ಟದ ಸಭೆಗಳಿಂದ ಬಂದ ಮಕ್ಕಳ ಸಮಸ್ಯೆಗಳು/ಬೇಡಿಕೆಗಳು/ಪ್ರಶ್ನೆಗಳನ್ನು ಕ್ರೋಢೀಕರಿಸಿ ಪಟ್ಟಿಯನ್ನು ಸಿದ್ಧಪಡಿಸುವುದು. | ಗ್ರಾಮ ಪಂಚಾಯತಿ ಮಟ್ಟದ ಮಕ್ಕಳ ಹಕ್ಕುಗಳ ಗ್ರಾಮ ಸಭೆ ನಡೆಯುವ 03 ದಿನಗಳ ಮುಂಚಿತವಾಗಿ. |
| 16 | ಗ್ರಾಮ ಪಂಚಾಯತಿ ಮಟ್ಟದಲ್ಲಿ ಮಕ್ಕಳ ಹಕ್ಕುಗಳ ಗ್ರಾಮ ಸಭೆಯನ್ನು ನಡೆಸುವುದು. | ಅಭಿಯಾನದ ಅವಧಿಯಲ್ಲಿ |
| 17 | ಮಕ್ಕಳ ಹಕ್ಕುಗಳ ಗ್ರಾಮ ಸಭೆಯಲ್ಲಿ ಅಂತಿಮಗೊಳಿಸಲಾದ ಮಕ್ಕಳ ಸಮಸ್ಯೆಗಳು/ಬೇಡಿಕೆಗಳು/ಪ್ರಶ್ನೆಗಳನ್ನು ಕ್ರೋಢೀಕರಿಸಿ ಪಟ್ಟಿಯನ್ನು ಕ್ರಿಯಾ ಯೋಜನೆ ಸಿದ್ಧಪಡಿಸುವುದು ಹಾಗೂ ತಾಲ್ಲೂಕು ಪಂಚಾಯತಿಗಳ ಮೂಲಕ ಜಿಲ್ಲಾ ಪಂಚಾಯತಿಗಳಿಗೆ ಸಲ್ಲಿಸುವುದು ಮತ್ತು ಗ್ರಾಮ ಪಂಚಾಯತಿಯಿಂದ ಪಂಚತಂತ್ರದಲ್ಲಿ ಅಳವಡಿಸುವುದು. | 30 ಜನವರಿ 2021 ರೊಳಗೆ |
| 18 | ಜಿಲ್ಲಾ ಪಂಚಾಯತಿಗಳಿಂದ ಗ್ರಾಮ ಪಂಚಾಯತಿ ಮಕ್ಕಳ ಹಕ್ಕುಗಳ ಸಭೆ ಮತ್ತು ಮತ್ತು ವಿವಿಧ ಮೂಲಗಳಿಂದ ಬಂದ ಮಕ್ಕಳಿಗೆ ಸಂಭಂದಿಸಿದ ಸಮಸ್ಯೆ/ಬೇಡಿಕೆ/ಪ್ರಶ್ನೆಗಳ ಪಟ್ಟಿ, ತಯಾರಿಸಲಾದ ಕ್ರಿಯಾ ಯೋಜನೆ ಹಾಗೂ "ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ"ದ, ಮಕ್ಕಳ ಹಕ್ಕುಗಳ ಗ್ರಾಮ ಸಭೆ ಮತ್ತು 10 ವಾರಗಳ ಅಭಿಯಾನದ ಕ್ರೋಢೀಕೃತ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವುದು | 10 ಫೆಬ್ರವರಿ 2021 ರೊಳಗೆ |
| 19 | ಗ್ರಾಮ ಪಂಚಾಯತಿ ಮಕ್ಕಳ ಹಕ್ಕುಗಳ ಸಭೆ ಮತ್ತು "ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ"ದ ಅಂತ್ಯದಲ್ಲಿ ತಯಾರಿಸಲಾದ ಕ್ರಿಯಾ ಯೋಜನೆಯ ಕ್ರಮ ಕೈಗೊಂಡ ವರದಿಯನ್ನು ಗ್ರಾಮ ಪಂಚಾಯತಿಯಿಂದ ಪಂಚತಂತ್ರದಲ್ಲಿ ಅಪ್‌ಲೋಡ್(ಅಪ್ಡೇಟ್) ಮಾಡುವುದು | ಅಬಿಯಾನದ ನಂತರ ಪ್ರತೀ 15 ದಿನಕ್ಕೊಮ್ಮೆ. |